ತೊಡೆಯಮೇಲೆ ಇರಿಸಿಕೊಂಡು ಚಂದ್ರಣ್ಣ ಚಲನೆಯೇ ಇಲ್ಲದೆ ಕುಳಿತಿದ್ದರು. ಅಕ್ಕ - ತಂಗಿಯರು ಹತ್ತಿರ ಕೂತು ತಲೆ, ಬೆನ್ನು ಸವರುತ್ತ ಸಂತೈಸುತ್ತಿದ್ದಾರೆ. ಎಲ್ಲರೂ ಒಬ್ಬರಿಗೊಬ್ಬರು ಹೌದಾಗಿದ್ದಾರೆ. ಈ ಭೂಕಂಪದಂತಹ ಅವಘಡದಲ್ಲಿ ಪರಸ್ಪರ ಅವಚಿಕೊಂಡು ಆಧಾರ ಅನಿಸ್ತಿದಾರೆ. ನಾನ್ಯಾಕೆ ಬೇರೆಯಾಗಿ ಎಸೆದು ಹೋದೆ? ನನಗ್ಯಾರು? ವಾಸ್ತವ ಪ್ರಪಂಚದಿಂದಲೇ ಎದ್ದು ಹೊರನಡೆದಂತೆ ಬಂದು ವಿನ್ಯಾಸನಿಗೆ ತಾಗಿದ ಆ ಜಾಗದಲ್ಲೇ ಮತ್ತೆ ಕುಳಿತೆ. ಚಳಿಗಾಲದ ನಡುರಾತ್ರಿ. ಕುಳಿತ ನೆಲ, ಒರಗಿದ ಗೋಡೆ, ಹೊರಗಿನಿಂದ ನುಗ್ಗಿ ಬರುತ್ತಿದ್ದ ಥಂಡಿಗಾಳಿ ಎಲ್ಲ ಒಟ್ಟಾಗಿ ಮರಗಟ್ಟಿದ ಅನುಭವ. ಮುಚ್ಚಿದ ಕಣ್ಣುಗಳ ಬಳಲಿಕೆಯ ಆಳದಲ್ಲಿ ಪ್ರತಿಫಲಿಸಿದ ಒಂದು ಸಂಜೀವಿನೀ ಚಿತ್ರ - ಮುಂದೆ ಮಲಗಿಸಿದ್ದ ವಿನೂನ ಅಂತರಾಳದಿಂದ ಅಮರ ಚೇತನದ ಎಳೆಯೊಂದು ಸೆಳೆದು ಬಂದು ನನ್ನೊಳಗೇ ಸೇರಿ ಉಳಿದಂತೆ - ಅರ್ಧ ಎಚ್ಚರ, ಅರ್ಧರ್ಧ ಮಂಪರಿನಲ್ಲಿ ಅದನ್ನು ಹಾಗೇ ಅಂಗೀಕರಿಸಿದಂತೆ ಒಮ್ಮೆಗೇ ಎಚ್ಚರಾದಾಗ ಮೈತುಂಬ ನಡುಕವಿತ್ತು! ಅಲ್ಲಿಗೇ ಬೆವರಿ ಮುದ್ದೆಯಾಗಿದ್ದೆ.

ಹತ್ತು ವರ್ಷಗಳಲ್ಲಿ ಅದೆಷ್ಟು ಬೆಳೆದುಬಿಟ್ಟ ಹುಡುಗ! ದೈಹಿಕ ಸಾಮರ್ಥ್ಯದ ದೇಖರೇಖೆಗಳಲ್ಲಿ ನನ್ನ ವ್ಯಾಪ್ತಿಗೇ ಬಂದಿರುತ್ತಿದ್ದವು. ಹೆಲ್ತ್ ಡ್ರಿಂಕ್ಸ್, ಮೊಟ್ಟೆಯ ಬಾಕ್ಸ್ ಎಲ್ಲವೂ ನನ್ನ ಮನೆ ಶೆಲ್ಫುಗಳಲ್ಲಿ. ಶಾಲಾ ಕಾಲೇಜುಗಳಲ್ಲಿ ರಾಶಿ ರಾಶಿಯಾಗಿ ಬಂದ ಬಹುಮಾನದ ಶೀಲ್ಡು, ಟ್ರೋಫಿಗಳಿಗೆಲ್ಲ ಹೊಸ ಶೋಕೇಸ್ ಮಾಡಿಸಿ ತಂದು ಇಲ್ಲೇ ಹೊಂದಿಸಿ ತಟ್ಟಿದ. ಸರ್ಟಿಫಿಕೇಟುಗಳೆಲ್ಲ ನನ್ನದೇ ಲಾಕರಲ್ಲಿ. ಊರ ಶಾಲೆಯಿಂದ ಜಿಲ್ಲಾಮಟ್ಟ ದಾಟಿದ ಅವನ ರೇಸ್, ಟೆನಿಸ್‌ಗಳು ಈಗ ಸ್ಟೇಟ್ ಲೆವೆಲಲ್ಲಿ ಮಿಂಚತೊಡಗಿದ್ದವು. ನಾವಿದ್ದ ಕಾಸರಗೋಡಿನಿಂದ ಕೇರಳದ ಮುಖ್ಯ ಪಟ್ಟಣಗಳಿಗೆಲ್ಲ ಆಗಾಗ ಹೋಗುವುದಿರುತ್ತಿತ್ತು. ಪ್ರಯಾಣದ ಎಲ್ಲ ತಯಾರಿಗಳನ್ನೂ ಇನ್ನಿಲ್ಲದ ಗಡಿಬಿಡಿ, ಗೊಂದಲಗಳಲ್ಲಿ ನನ್ನಲ್ಲೇ ಮಾಡಿಸಿಕೊಂಡು ಹೋಗುತ್ತಿದ್ದ. ವಿನ್ಯಾಸನ ಯಾವ ಭಾರಗಳೂ ಇಲ್ಲದ ನಿರಾಳಗಳನ್ನು ತಂದೆ - ತಾಯಿ ಅರಿವೇ ಇಲ್ಲದೆ ಅನುಭವಿಸುತ್ತಿದ್ದರು. ಮ್ಯಾಚು ಮುಗಿಸಿ ಹಿಂತಿರುಗಿದಾಗ ತಾನು ತಂದ ಟ್ರೋಫಿಯನ್ನು ನನ್ನ ಕೈಗಿಟ್ಟು ಗಟ್ಟಿ ತಬ್ಬಿ ಹಿಡೀತಿದ್ದ. ತನ್ನ ಉನ್ನತಗಳನ್ನೆಲ್ಲಾ ನನ್ನೊಳಗೆ ತುಂಬುವುದರಲ್ಲಿ ಅವನ ಸಂತೃಪ್ತಿಯ ಸಮಷ್ಟಿಯಿರುತ್ತಿತ್ತು. ಮೊದಲಿಗೆ ನನ್ನನ್ನು 'ಮಾಯೀ' (ಅತ್ತೆ) ಎಂದು ಕರೆಯಲು ಕಲಿಸಿದ್ದರು. ಇತ್ತೀಚೆಗೆ ಹಾಗೇ 'ಮಾ...' ಅಂತಂದು ಇನ್ನೂ ಹೆಚ್ಚಿನ ಜಬರದಸ್ತು ತೋರುತ್ತಿದ್ದ.

ನೋವಿನಲ್ಲಿ ನಲುಗಿದ ಅಷ್ಟೆಲ್ಲ ಗಂಟೆಗಳನ್ನು ಎಳೆದು ಹಗಲಿಗೊಪ್ಪಿಸಿ ರಾತ್ರಿ ಸರಿಯಿತು. ಮೂಡಿದ ಬೆಳಕಿನಲ್ಲಿ ಯಾತನೆಗಳೆಲ್ಲ ಹೊಸರೂಪ ಹೊದ್ದು ಪುನರಾವರ್ತನೆ ಆಗತೊಡಗಿದವು. ಚಿತೆ ಸಿದ್ಧವಾಗಿತ್ತು. ಅಂತಿಮ ಯಾತ್ರೆ ತೊಡಗಿತು. 'ಈ ಕರ್ಮಗಳೆಲ್ಲ ಧರ್ಮವೆ?' ಅನ್ನುವ ಒಂದು ವಿವಿಕ್ತ ವಿವೇಚನೆ ಮನಸ್ಸಿಗೆ. ಇಂತಹ ಸನ್ನಿವೇಶಕ್ಕೆ ಇದು ನ್ಯಾಯವೆ? ಮರಣದ ಆಘಾತದ ಮುಂದೆ ಈ ಆಚರಣೆಗಳ ಅನಿವಾರ್ಯ ಹೇಗೆ ಮಾಡಬೇಕು? ಮಗನ ಮೋರೆ ಹಿಡಿದು ಭೋರಾಡಿ ಅಳುತ್ತಿದ್ದ ಮಾಲಕ್ಕನನ್ನು ಮತ್ತೆ ಮನೆಯೊಳಗೆ ಕರೆದೊಯ್ದರು. ಹೆಂಗಸರೆಲ್ಲಾ ಹಿಂಬಾಲಿಸಿ ಒಳಸೇರಿದಾಗ ನಾನೊಬ್ಬಳೇ ಈ ಕಡೆ ಹೊರಟೆ. ಪುರೋಹಿತ ಹುಡುಗ ಆದರ್ಶ ನನ್ನನ್ನು ಪಕ್ಕಕ್ಕೆ ಕರೆದು ಕಿವಿಯಲ್ಲಿ ಮೆಲ್ಲನೆ ಉಸುರಿದ 'ಟೀಚರೇ, ಸಂಸ್ಕಾರದ ಅಂಗವಾಗಿ ನವದ್ವಾರಗಳಲ್ಲಿ ಚಿನ್ನದ ತುಣುಕು ಅವಶ್ಯವಿದೆ. ಇಂಥ ಹೊತ್ತಿಗೆ ಅವರನ್ನು ಹೇಗೆ ಕೇಳೋದು?' ಏನೇನೂ ತಡವರಿಸಲಿಲ್ಲ ನಾನು. ಕತ್ತಿನಲ್ಲಿದ್ದ ಸರ ತೆಗೆದು ಅದರ ಕೊಂಡಿಕಳಚಿ ಅವನ ಕೈಗಿತ್ತೆ. ನನ್ನ ಮುದ್ದು ವಿನ್ಯಾಸನ ಅಂಗಾಗಳಲ್ಲಿ ನನ್ನದಾದ ಈ ಸಹಿಯ ಸಾಧ್ಯತೆ ಹೀಗೆ ಒದಗಿ ಬಂದುದು... ಇದೆಂತಹ ಪೂರ್ವಪುಣ್ಯ? ಇಷ್ಟೆಲ್ಲ ಜನಸಾಗರ ಜತೆಗಿದೆ. ರಾಜಕೀಯದಿಂದ ತೊಡಗಿ ಶಿಕ್ಷಣ, ಸಾಹಿತ್ಯ, ಕಲೆ, ಮಠ, ಮಾನ್ಯರೆಲ್ಲಾ ಒಟ್ಟಾಗಿದ್ದಾರೆ. ಆದರೂ... ಚಂದ್ರಣ್ಣನಿಗೆ... ಯಾರು? ಯಾವುದೋ ಒಂದು ಅಜ್ಞಾತ ಆಯಾಮದಲ್ಲಿ ಅವರು ಒಬ್ಬರೇ ಇದ್ದಾರೆ. ಜನ್ಮದಲ್ಲೆಂದೂ ಬರಬಾರದ, ಬರಲೇಬಾರದ ಈ ಸಂದರ್ಭ. ಈ ಕ್ರಿಯೆಯ ಒಳಗೆ ಒಬ್ಬರೇ ಇದ್ದಾರೆ. ಎಲ್ಲ ಅಸಹನೀಯಗಳ ಅತೀತದಲ್ಲಿ ಒಂದು ಸಂವೇದನೆಯಾಗಿ ಹೇಗಾದರೂ ಅವರೊಡನಿರಬೇಕು ಎಂದು ಬರಿಗಾಲಲ್ಲಿ ಓಡತೊಡಗಿದೆ. ನನ್ನ ವಿದ್ಯಾರ್ಥಿ, ವಿನ್ಯಾಸನ ಪರಮಾಪ್ತ ಮಿತ್ರ ಅವಿನಾಶ ಬೇಗ ಬಂದು ನನ್ನ ಕೈಹಿಡಿದುಕೊಂಡ. ಕಲ್ಲು ಎಡವದೆ, ಬಟ್ಟೆ